1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ: 667/2025

ಚಾಸಾ: 10 ಪ್ರಾಸಾ:6

ದಿನಾಂಕ: 19.01.2026

ವಾಗ್ಮೂಲದವರ ಹೆಸರು : ಶ್ರೀಮತಿ ಯಶೋಧ
ಗಂಡನ ಹೆಸರು : ಮಂಜುನಾಥ
ವಯಸ್ಸು : 45 ವರ್ಷ
ಉದ್ಯೋಗ : ಮುಖ್ಯ ಪೇದೆ
ವಾಸ ಸ್ಥಳ : ಕುಂದಾಪುರ

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>

ನಾನು ಕಳೆದ 3 ವರ್ಷಗಳಿಂದ ಕುಂದಾಪುರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 17-03-2025 ರಂದು ಸಂಜೆ 6-30 ಗಂಟೆಗೆ ಕುಂದಾಪುರ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ 7-30ರವರೆಗೂ ಒಳರೋಗಿಯಾಗಿ ದಾಖಲಾಗಿದ್ದ ಚಾಸಾ-1 ರವರು ನೀಡಿದ ಲಿಖಿತ ಪಿರ್ಯಾದನ್ನು ಪಡೆದುಕೊಂಡು ರಾತ್ರಿ 8-15 ಗಂಟೆಗೆ ಠಾಣೆಗೆ ಹಾಜರಾಗಿ ಅದನ್ನು ಚಾಸಾ-11 ರವರಿಗೆ ಹಾಜರುಪಡಿಸಿರುತ್ತೇನೆ.

ಸಾಕ್ಷಿ ನಿಪಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಸ್ ಜಿ ಎಸ್ ರವರಿಂದ:</u>

ನಿಪಿ-1ನ್ನು ಪ್ರಾಸಾ-1 ರವರು ತನ್ನ ಮಗಳಾದ ಚಾಸಾ-2 ರವರ ಮೂಲಕ ಬರೆಯಿಸಿರುತ್ತಾರೆ. ಪ್ರಕರಣವನ್ನು ದಾಖಲಿಸುವ ಉದ್ದೇಶದಿಂದ ನಿಪಿ-1ನ್ನು ನಾನು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1ರಲ್ಲಿ ಕಂಡು ಬರುವಂತೆ ಚಾಸಾ-1 ರವರು ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**